ಪ್ರಾರಂಭಿಸಲಾಯಿತು. ನಂತರ 2003–04ನೇ ಸಾಲಿನ ಜುಲೈ ಮಾಹೆಯಿಂದ ಉಳಿದ 20 ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ.

ಆ) 4440410 ಲಕ್ಷ ಮಕ್ಕಳು.

ಇ)

ವರ್ಷ	ಹಂಚಿಕೆ (ಕ್ವಿಂಟಾಲ್‌ಗಳಲ್ಲಿ)
2002–03	15,35,646.24
2003–04	14,58,531.84
2004–05	11,74,954.72

ಈ)

ವರ್ಷ	ಎತ್ತುಗಳಿ (ಕ್ವಿಂಟಾಲ್‌ಗಳಲ್ಲಿ)
2002–03	12,22,420.80
2003–04	8,53,868.74
2004–05	80,804.06
	(ಮೇ 2004ರವರೆಗೆ ಮಾತ್ರ)

...

296 (537) : ಶ್ರೀ ಚಿಕ್ಕನಗೌಡ್ ಸಿದ್ದನಗೌಡ ಈಶ್ವರಗೌಡ (ಕಲ್ಗುಟಗಿ) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಹಾಲಿ ಅಸ್ಥಿತ್ವದಲ್ಲಿರುವ ಐ.ಟಿ.ಐ. (ಕೈಗಾರಿಕಾ ತರಬೇತಿ ಸಂಸ್ಥೆಗಳು) ಗಳೆಷ್ಟು ಹಾಗೂ ಅವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ;

ಆ) ಈ ಜಿಲ್ಲೆಯಲ್ಲಿ ಹೊಸದಾಗಿ ಐ.ಟಿ.ಐ. ಕಾಲೇಜು ಸ್ಥಾಪನೆಗೆ ಎಲ್ಲೆಲ್ಲಿ ಸ್ಥಳ ಗುರುತಿಸಲಾಗಿದೆ;

ಇ) ಕಲಘಟಗಿಯಲ್ಲಿ ಐ.ಟಿ.ಐ. ಕಾಲೇಜು ಸ್ಥಾಪಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಈ) ಅದಕ್ಕೆ ಮಂಜೂರಾತಿಯನ್ನು ಯಾವಾಗ ನೀಡಲಾಗುವುದು (ವಿವರ ಒದಗಿಸುವುದು)?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಅ) 1) ಸರ್ಕಾರಿ ಕೈ.ತ. ಸಂಸ್ಥೆ – 3

2) ಅನುದಾನಿತ ಕೈ.ತ. ಸಂಸ್ಥೆ – 9

3) ಅನುದಾನರಹಿತ ಕೈ.ತ. ಸಂಸ್ಥೆ – 20

ಒಟ್ಟು – **32**

ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಇಲ್ಲ

ಇ) ಈಗಾಗಲೇ ಕಲಘಟಗಿಯಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಲಾಗಿದೆ.

ಈ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

Annexure to Unstarred L.A. Question No. 537 of Hon'ble M.L.A. Sri Chikkanagowder Siddana Gowder Eshwara Gowda.

Government ITI's

1. Dharwad
2. Hubli
3. Kalghatgi

AIDED ITI's

1. Sha D.J. Chadda ITI, Hubli
2. S.J. M.V.S. ITI (W) Hubli
3. Lingayath Education Association, Awappanna ITI Dharwad
4. Jihveshwara Shikshana Samsthe (ITI) Old Hubli
5. Jagatguru Ajatha Nagalinga Mahaswamy ITI, Navalgund, Dharwad.
6. S.S.K. Hithavardhaka Sangh's Y.T. Miskin ITC, Saptapur, Dharwad
7. Students Aid ITC, Sapthapur, Dharwad
8. Karnataka Holi Patil ITC, Hubli.
9. Mahila Vidya Peeta ITI, Hubli

UN-AIDED ITI's

1. KSRTC ITI, Hubli
2. Sanjavya Grameena Vidya Samsthe ITC, Holealur, Dharwad.
3. Madarachannaiah ITC, Shirol, Naragund Taluk.
4. S.J.R. Vidya Samsthe Kundgol
5. Prof. K.S. Sharama ITC, Hubli
6. Dr. Ambedkar Shikshan Samsthe, Mishrekota, Kalgatki Taluk
7. N.T.S. Samsthe's ITI, Navalgund,

8. Most Rev. Dr. V.P. Dandin ITI, Dharwad
9. Vikas ITI, Dharwad
10. Ashrapee ITC, Hubli.
11. Multitek ITC, Dharwad.
12. Nargund Taluk Rural Education Societies ITI, Nargund.
13. Malenadu Educationl ITI, Nigadhi, Dharwad Dist.
14. D.M.W.E. Society ITI, Hukkeri.
15. Lingayath Education Association Avvappanna
16. Saint Anotony ITI, Hubli
17. Anjuman Islam ITI, Dharwad.
18. Sadguru Seva Rural ITI, Akki Aluru
19. Sri Guru Gorakshanatha ITI, Hubli
20. Sri Guru Siddeshwara Vidya Vardhaka Sangha ITI, Haveri.

...

297 (539) : ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗುಟಗಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಎಸ್‌ಸಿ:ಎಸ್‌ಟಿ ಹಾಗೂ ಬಿಸಿಎಂ ಫಲಾನುಭವಿಗಳಿಗೆ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಿಸಿ ಕೊಡಲಾಗಿದೆ. (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಇದಕ್ಕಾಗಿ ಕಲಘಟಗಿಯಲ್ಲಿ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿತ್ತು ಹಾಗೂ ಎಷ್ಟು ಜನರಿಗೆ ಗಂಗಾಕಲ್ಯಾಣ ಯೋಜನೆಯ ಲಾಭ ಪಡೆದು ಕೊಳವೆ ಬಾವಿ ನಿರ್ಮಿಸಿಕೊಡಲಾಗಿತ್ತು.

ಇ) ಇವುಗಳಲ್ಲಿ ಪೂರ್ಣಗೊಂಡ ಮತ್ತು ಅಪೂರ್ಣಗೊಂಡಿರುವವೆಷ್ಟು;

ಈ) ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ;

ಉ) ಈ ಪೈಕಿ ಕೊಳವೆ ಬಾವಿ ಕೊರೆಸಿ ವಿದ್ಯುತ್ ಸಂಪರ್ಕವಿಲ್ಲದೆ ಬಾಕಿ ಇರುವ ಪ್ರಕರಣಗಳೆಷ್ಟು ಹಾಗೂ ಸರ್ಕಾರ ಕೈಗೊಂಡ ಕ್ರಮಗಳೇನು (ವಿವರ ತಿಳಿಸುವುದು)?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು)

ಅ) ಧಾರವಾಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಕೆಳಕಂಡಂತಿದೆ.

ನಿಗಮದ ಹೆಸರು	ಕೊಳವೆ ಬಾವಿಗಳ ಸಂಖ್ಯೆ
1. ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ	140